ಕೊನೆಯಾಗುತ್ತದೆಂಬ ಕನಸು ಕಾಣುತ್ತಿದ್ದ ಕಾಲ. ಆರಿದ್ದ ಸಂಬಳ ಹತ್ತಾಗಿ, ಹದಿನೈದಾಗಿ ಈಗ ಇಪ್ಪತ್ತೈದಾಗಿದೆ. ಲೆಕ್ಕದ ಪುಸ್ತಕ ಬದಲಾಗಿದೆಯಾದರೂ ಲೆಕ್ಕಗಳು ಮಾತ್ರ ಹಾಗೇ ಉಳಿದಿವೆ.

ಹೇಗಾದರೂ ಮಾಡಿ ಒಂದೊಳ್ಳೆ ಎಂಎನ್ಸಿಗೆ ದಾಟಿಕೊಳ್ಳಬೇಕು ಎಂದುಕೊಂಡ ರಾಜೀವ. ಈ ಹಿಂದೆ ಕೂಡಾ ಆ ಪ್ರಯತ್ನ ಮಾಡಿದ್ದನಾದರೂ ಅಲ್ಲಿನ ನಿರ್ಬಂಧಿತ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಬಿಟ್ಟುಬಂದಿದ್ದ. ಈ ಬಾರಿ ತನ್ನ ಒಳ ತುಮುಲಗಳನ್ನೆಲ್ಲಾ ಬದಿಗಿಟ್ಟು ಸಂಬಳವೊಂದನ್ನೇ ಗಮನದಲ್ಲಿಟ್ಟುಕೊಂಡು ದುಡಿಯಬೇಕು. ಕನಿಷ್ಠ ಮೂವತ್ತೈದು ಸಾವಿರವಾದರೂ ಕೈಗೆ ಬಂದರೆ ಸಾಕು. ಬಾಡಿಗೆ, ಓಡಾಟ, ಊಟ, ತಿಂಡಿ, ಇತ್ಯಾದಿಗಳಿಗೆಂದು ತಿಂಗಳಿಗೆ ಹತ್ತು ಸಾವಿರ ಎತ್ತಿಟ್ಟರೂ ಕನಿಷ್ಠ ಇಪ್ಪತ್ತು ಸಾವಿರ ಕೈಯಲ್ಲುಳಿಯುತ್ತದೆ. ಹನ್ನೆರಡು ಲಕ್ಷ ಲೋನ್ ತೆಗೆದರೂ ಸಾಕು, ಅರ್ಧ ಮುಕ್ಕಾಲೆಕರೆಯಷ್ಟು ತೋಟ ಕೊಳ್ಳಬಹುದು. ಸ್ವಲ್ಪ ವರ್ಷ ಕೆಲಸ ಮಾಡಿ ಒಂದಷ್ಟು ಸಾಲ ತೀರಿಸುವ ಹೊತ್ತಿಗೆ ತೋಟವೂ ಫಲಕೊಡತೊಡಗುತ್ತದೆ. ಆಗ ಮೆತ್ತಗೆ ಈ ಕಂಪನಿಯ ಹಡಗನ್ನು ನೀರಿಗೆ ಬಿಟ್ಟು ಊರಿನ ದೋಣಿಗೆ ದಾಟಿಕೊಳ್ಳಬೇಕು. ಈಗಲೇ ವಯಸ್ಸು ಮೂವತ್ತೈದಕ್ಕೆ ಎರಡೇ ಮೆಟ್ಟಿಲು ದೂರದಲ್ಲಿದೆ. ಇನ್ನು ನಾಲ್ಕು ವರ್ಷಗಳೊಳಗಾಗಿ ಇವನ್ನೆಲ್ಲಾ ಸಾಧಿಸಿ ಊರು ಸೇರಿಬಿಡಬೇಕು. ಮತ್ತೂ ತಡವಾದರೆ ದೇಹ ತೋಟದ ಕೆಲಸಕ್ಕೆ ಬಗ್ಗಲಾರದು.

ಹಾಗಾದರೆ ಮದುವೆ? ಅದಕ್ಕೆ ಬೇಕಾದ ಹಣ? ಅದರ ಮುಂದಿನ ಕತೆ?

ಕೊನೆಯಿಲ್ಲದ ಪ್ರಶ್ನೆಗಳಿಗೆ ಉತ್ತರ ಹುಡುಕುವುದಕ್ಕಿಂತ ನಿದ್ರಿಸುವುದೇ ಸುಲಭವೆಂದುಕೊಂಡ ಮನಸ್ಸು ನಿದ್ರೆಗೆ ಜಾರಿತು.

★★★

''ನಾಳೆ ಚಂದ್ರಲೇಖಾಳ ಮದುವೆಯಿದೆ ಸರ್. ಆಫೀಸಿನವರೆಲ್ಲಾ ಮೈಸೂರಿಗೆ ಹೋಗುತ್ತಿದ್ದಾರೆ. ನಾನೂ ಅವರೊಟ್ಟಿಗೆ ಹೋಗುವುದಕ್ಕೆ ರಜೆ ಬೇ...''

''ಗಜೇಂದ್ರ ಆ್ಯಂಡ್ ಕೋದು ಪೇಮೆಂಟ್ ಬಂತಾ?''

ರಾಜೀವನ ಮಾತು ಕೇಳಿಸಿಯೇ ಇಲ್ಲವೆಂಬಂತೆ ಕೇಳಿದ ಶರ್ಮಾ.

''ಆಲ್ಮೋಸ್ಟ್ ಆಗಿದೆ ಸರ್. ಫಾಲೋ ಅಪ್ ಮಾಡುತ್ತಿದ್ದೇನೆ. ಈ ವೀಕೆಂಡ್ ಹೊತ್ತಿಗೆ ಮತ್ತೊಮ್ಮೆ...''

''ಇವತ್ತು ಇ–ಸ್ಟ್ಯಾಂಪಿಗ್ ಮುಗಿಸಿಕೊಂಡು ನಾಳೆಯೇ ಅವರಿಗೆ ಮತ್ತೊಂದು ರೌಂಡ್ ರಿಮೈಂಡರ್ ನೋಟಿಸು ಕೊಟ್ಟು ಬನ್ನಿ. ವಾರದ ಕೊನೆಯ ತನಕವೆಲ್ಲಾ ಕಾಯಲು ಸಾಧ್ಯವಿಲ್ಲ.''

''ಅಲ್ಲ ಸರ್. ನಾಳೆ ಮದುವೆ ಮುಗಿಸಿಕೊಂಡು ನಾಡಿದ್ದು ಬೆಳಗ್ಗೆಯೇ...''

''ವಾರಕ್ಕೆ ಮೂರು ಜನ ಮದುವೆಯಾಗುತ್ತಾರೆ. ಅದಕ್ಕೆಲ್ಲಾ ರಜೆ ಕೊಡುತ್ತಾ ಹೋದರೆ ಇಲ್ಲಿ ಕೆಲಸ ಮಾಡುವವರು ಯಾರು? ಪ್ಲೀಸ್ ಡೂ ಆ್ಯಸ್ ಐ ಸೆಡ್!''

ತಾನಿಟ್ಟ ಕೋರಿಕೆಗೂ, ಅವರು ಕೊಟ್ಟ ತೀರ್ಮಾನಕ್ಕೂ ಸಂಬಂಧವೇ ಇಲ್ಲವಲ್ಲಾ ಎಂದುಕೊಂಡು ಸಣ್ಣಗಿನ ದನಿಯಲ್ಲಿ ಕೊನೆಯ ಪ್ರಯತ್ನವೆಂಬಂತೆ ಕೇಳಹೊರಟ ರಾಜೀವನ ಮಾತನ್ನು ಅರ್ಧಕ್ಕೇ ತುಂಡರಿಸುತ್ತಾ ಶರ್ಮಾ ಹೆಚ್ಚುಕಮ್ಮಿ ಕಿರುಚಿಯೇ ಬಿಟ್ಟ. ಪೆಚ್ಚುಮೋರೆ ಹಾಕಿಕೊಂಡು ಹೊರಬಂದವನಿಗೆ ತನ್ನ ಕ್ಯಾಬಿನ್‌ನ ತುಂಬಾ ಕುಹುಕದ ಮುಸಿಮುಸಿ ನಗೆ ತಾಂಡವವಾಡುತ್ತಿರುವಂತೆ ಭಾಸವಾಯಿತು. ಅವಮಾನದ ಭಾರಕ್ಕೆ ಕುಸಿದವನಂತೆ ಕುರ್ಚಿಯ ಮೇಲೆ ಕುಳಿತವನಿಗೆ ಕಾಳಜಿ ತುಂಬಿದ ನೋಟವೊಂದು ತನ್ನತ್ತಲೇ ನೋಡುತ್ತಿರುವಂತೆನಿಸಿ ಮೆಲ್ಲನೆ ಕತ್ತುಹೊರಳಿಸಿ ನೋಡಿದ.

ಸಾಂತ್ವನ ಸೂಸುವ ದೃಷ್ಟಿಯನ್ನು ತನ್ನತ್ತಲೇ ನೆಟ್ಟು ಕುಳಿತಿದ್ದಳು... ಕಾಡಿಗೆ ಕಂಗಳ ಹುಡುಗಿ ಮಂಗಳಾ!